ದಿನಾಂಕ 20- 03-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

ಮುಖ್ಯ ವಿಚಾರಣೆಃ ಶ್ರೀ ಜಿ.ಆರ್. ವಿ.ವಾದಿ ಪರ ವಕೀಲರಿಂದಃ

ನನ್ನ ಸಾಕ್ಷಿ ಹೇಳಿಕೆಯ ಭಾಗವಾಗಿ ಪ್ರಮಾಣಪತ್ರವನ್ನು ಸಲ್ಲಿಸಿದ್ದು ಅದರಲ್ಲಿ ಬರೆದಿರುವ ಎಲ್ಲಾ ಅಂಶಗಳು ಸತ್ಯವಾಗಿರುತ್ತದೆ. ಅದನ್ನು ತಿಳಿದುಕೊಂಡು ಸಹಿ ಮಾಡಿರುತ್ತೇನೆ.

ದಿನಾಂಕ 05-05-2010 ರ ಕ್ರಯದ ಕರಾರು ಪತ್ರವನ್ನು ಹಾಜರುಪಡಿಸಿದ್ದು ಅದನ್ನು ನಿಪಿ-1 ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ-1 ರಲ್ಲಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಸಾಕ್ಷಿ ಯ ಸಹಿಯನ್ನು ನಿಪಿ-1 ಎ ಎಂದು ಗುರುತಿಸಲಾಯಿತು. ನಿಪಿ-1 ಅನ್ನು 1 ಮತ್ತು 2 ನೇ ಪ್ರತಿವಾದಿಗಳು ನನಗೆ ಬರೆದುಕೊಟ್ಟಿರುತ್ತಾರೆ. ಸಾಕ್ಷಿಯು ನಿಪಿ-1 ರಲ್ಲಿ 1 ಮತ್ತು 2 ನೇ ಪ್ರತಿವಾದಿಗಳ ಸಹಿಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ನಿಪಿ-1 ಬಿ ಮತುತ ನಿಪಿ-1 ಸಿ ಎಂದು ಕ್ರಮವಾಗಿ ಗುರುತಿಸಲಾಯಿತು. ಸಾಕ್ಷಿಯು ನಿಪಿ-1 ರಲ್ಲಿ ಸಹಿ ಮಾಡಿರುವ ನಾರಾಯಣ ರೆಡ್ಡಿ ಮತ್ತು ಮುರಳಿಧರ ರವರ ಸಹಿಗಳನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯು ನಿಪಿ-1 ರ ಬಿಕ್ಲಂ ದಾರ ರಾದ ಹೆಚ್ ಕೆ ಮಹದೇವ್ ರವರ ಸಹಿಯನ್ನು ನೋಡಿ ಗುರುತಿಸಿರುತ್ತಾರೆ.

ದಿನಾಂಕ 21.02.2014 ರಂದು ನನ್ನ ವಕೀಲರ ಮೂಲಕ 1 ರಿಂದ 3 ನೇ ಪ್ರತಿವಾದಿಗಳಿಗೆ ನೀಡಿರುವ ತಿಳುವಳಿಕೆ ಪತ್ರದ ಕಚೇರಿ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ-2 ಎಂದು ಗುರುತಿಸಲಾಯಿತು. ಮೂರು ಅಂಚೆ ರಶೀದಿಗಳನ್ನು ಹಾಜುರು ಪಡಿಸಿದ್ದು ಅವುಗಳನ್ನು ನಿಪಿ-3 ರಿಂದ 5 ಎಂದು ಗುರುತಿಸಲಾಯಿತು.

ದಿನಾಂಕ 11-03-2014 ರಂದು ಪ್ರತಿವಾದಿಗಳು ನನಗೆ ನೀಡಿರುವ ಪ್ರತ್ಯುತ್ತರ ತಿಳುವಳಿಕೆ ಪತ್ರವನ್ನು ಹಾಜರು ಪಡಿಸಿದ್ದು ಅದನ್ನು ನಿಪಿ-6 ಎಂದು ಗುರುತಿಸಲಾಯಿತು.

ಎರಡು ತಿರಸ್ಕರಿಸಲಾದ ಆರ್ ಪಿ ಎ ಡಿ ಕವರ ಗಳನ್ನು ಹಾಜರು ಪಡಿಸಿದ್ದು ಅದನ್ನು ನಿಪಿ-7 ಮತ್ತು 8 ಹಾಗೂ ಅವುಗಳ ಒಳಗಿರುವ ತಿಳುವಳಿಕೆ ಪತ್ರದ ಪ್ರತಿಗಳನ್ನು ನಿಪಿ-7 ಎ ಮತ್ತು ನಿಪಿ-8 ಎ ಎಂದು ಗುರುತಿಸಲಾಯಿತು.

ಸರ್ವೆ ನಂ 136/1 ರ ಗಣಕೀಕೃತ ಪಹಣಿಯನ್ನು ಹಾಜರು ಪಡಿಸಿದ್ದು ಅದನ್ನು ನಿಪಿ-9 ಎಂದು ಗುರುತಿಸಲಾಯಿತು.

ಸರ್ವೆ ನಂ 137/2 ರ ಎರಡು ಪುಟಗಳ ಗಣಕೀಕೃತ ಪಹಣಿಯನ್ನು ಹಾಜರು ಪಡಿಸಿದ್ದು ಅದನ್ನು ನಿಪಿ-10 ಎಂದು ಗುರುತಿಸಲಾಯಿತು.

ನನ್ನ 2011-12 ನೇ ಸಾಲಿನ ಆದಾಯ ತೆರಿಗೆ ಪಾರಂ ಅನ್ನು ಹಾಜರು ಪಡಿಸಿದ್ದು ಅದನ್ನು ನಿಪಿ-11 ಎಂದು ಗುರುತಿಸಲಾಯಿತು.

ನನ್ನ 2012-13 ನೇ ಸಾಲಿನ ಆದಾಯ ತೆರಿಗೆ ಪಾರಂ ಅನ್ನು ಹಾಜರು ಪಡಿಸಿದ್ದು ಅದನ್ನು ನಿಪಿ-12 ಎಂದು ಗುರುತಿಸಲಾಯಿತು.

ನನ್ನ 2013-14 ನೇ ಸಾಲಿನ ಆದಾಯ ತೆರಿಗೆ ಪಾರಂ ಅನ್ನು ಹಾಜರು ಪಡಿಸಿದ್ದು ಅದನ್ನು ನಿಪಿ-13 ಎಂದು ಗುರುತಿಸಲಾಯಿತು.

ನನ್ನ 2014-15 ನೇ ಸಾಲಿನ ಆದಾಯ ತೆರಿಗೆ ಪಾರಂ ಅನ್ನು ಹಾಜರು ಪಡಿಸಿದ್ದು ಅದನ್ನು ನಿಪಿ-14 ಎಂದು ಗುರುತಿಸಲಾಯಿತು.

ನನ್ನ ಮುಖ್ಯ ವಿಚಾರಣಾ ಸಾಕ್ಷ್ಯ ಹಾಗೂ ದಾಸ್ತಾವೇಜುಗಳನ್ನು ಪರಿಶೀಲಿಸಿ ನನ್ನ ದಾವೆಯನ್ನು ಪುರಸ್ಕರಿಸಿ ನನ್ನ ದಾವೆಯಲ್ಲಿ ಕೋರಿರುವಂತೆ ಡಿಕ್ರಿ ಮಾಡಬೇಕೆಂದು ಕೋರುತ್ತೇನೆ.

**(**ಪ್ರತಿವಾದಿಗಳ ಪರ ವಕೀಲರು ಗೈರು ಹಾಜರಿದ್ದು ಪಾಟೀ ಸವಾಲಿಗೆ ಕಾಲಾವಕಾಶ ನೀಡಲಾಯಿತು**.)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು).

ಓ.ಹೇ.ಕೇ.ಸ. ಇದೆ

ಸಹಿ/-
ಪ್ರ.ಸಿ.ನ್ಯಾ ಮತ್ತು ಜೆಎಂಎಫ್‌ಸಿ,
ಗೌರಿಬಿದನೂರು